# 3. ಶ್ರಾವಣ ವೈಭವ

– ದ.ರಾ. ಬೇಂದ್ರೆ

(ಕವಿ ಪರಿಚಯ: ಈ ಪದ್ಯಭಾಗವನ್ನು ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಬರೆದಿರುವ 'ಸಖೀಗೀತ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ. ಇವರ ಕಾವ್ಯನಾಮ 'ಅಂಬಿಕಾತನಯದತ್ತ' ಎಂದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ದ. ರಾ. ಬೇಂದ್ರೆ ಅವರು ಬರೆದ ಪದ್ಯಗಳು ವೈಶಿಷ್ಟ್ಯಪೂರ್ಣವಾದುವು. 'ದೇಶೀ'ಯ ಸೊಬಗು, ಬೆಡಗು, ಬಿನ್ನಾಣಗಳು ಇವರ ಪದ್ಯಗಳ ಪ್ರಧಾನ ಲಕ್ಷಣಗಳು. ಸರಳವಾದ ಪದಬಳಕೆಯ ಅಡುಮಾತು ನುಡಿಗಳೇ ಮೊದಲಾದವುಗಳು ಸಹಜ ಕವಿತೆಗಳಾಗಿ ಇವರ ಲೇಖನಿಯಿಂದ ಮೂಡಿ ಹೊರಬರುತ್ತವೆ. ಇವರು ಸೂರ್ಯಪಾನ, ಗರಿ, ನಾದಲೀಲೆ ಮುಂತಾದ ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ 'ಅರಳು ಮರಳು' ಎಂಬ ಕವನ ಸಂಕಲನಕ್ಕೆ ಭಾರತ ಸರಕಾರದ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿದೆ. ಮೈಸೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿದೆ. 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಇವರ ನಾಕು ತಂತಿ ಕವನ ಸಂಕಲನಕ್ಕೆ 'ಜ್ಞಾನಪೀಠ' ಪ್ರಶಸ್ತಿ ದೊರಕಿದೆ.

ಶ್ರಾವಣ ಮಾಸದಲ್ಲಿ ಪ್ರಕೃತಿಯ ಸೊಬಗು ಅತ್ಯಂತ ಮನೋಹರವಾಗಿರುತ್ತದೆ. ತಾವು ಕಂಡ ಆ ಮನೋಹರ ಸ್ವರೂಪವನ್ನು ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾರೆ).



ಏನು ಹಸಿರು ! ಏನು ಹಳದಿ !
ಸುತ್ತ ಮುತ್ತ ನೋಡು ಕೆಳದಿ ॥ ಪಲ್ಲ ॥

ಹುಲ್ಲ ಹೂವು ಆದರೇನು,
ಹಬ್ಬದುಬ್ಬಿ ನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ.

ಮಳೆಯ ಬಿಲ್ಲು ಮುರಿದು ಹತ್ತು
ಕಡೆಗು ಹಂಚಿದಂತಿದೆ;
ಹುಲ್ಲು ಕಸವು ಬಣ್ಣ ಬಡೆದು
ಹೂತು ಹಿಗ್ಗಿ ನಿಂತಿದೆ.

ನೆಲದ ಬಸಿರ ರತ್ನ ರತ್ನ,
ತನ್ನ ಸೊಬಗ ಕಳಿಸಿದೆ;
ಬಣ್ಣ ದೊಂದು ಜಾತ್ರೆಗಾಗಿ
ತನ್ನ ಪಯಣ ಬೆಳೆಸಿದೆ.

ಮಣ್ಣು ಹುಡಿಯ ಕಣಕಣವೂ,
ಕಣ್ಣು ಪಡೆದ ಹಾಗಿದೆ.
ಬಾನಿನಂಚಿನಲ್ಲಿ ಮೋಡ,
ನೋಡಲಿದನೆ ಬಾಗಿದೆ.

ಮುಗಿಲು ನೆಲಕೆ ಮುಕ್ಕು ಚಿಕ್ಕೆ
ಕಾಳುಗಳನು ಬಿತ್ತಿದೆ;
ನೆಲವು ಮುಗಿಲಿಗರ್ತಿಯಿಂದ
ಆರತಿಯೆನ್ನೆತ್ತಿದೆ

ಬಸಿರೆ ಹೊಲಕೆ[2] ಹೂವು ಮುಡಿಸ
ಲೆಂದು ಬಂದ ಸಂಭ್ರಮ;
ಸೃಷ್ಟಿಯಲ್ಲೆ ಕಾಣತಿಹುದು,
ಮನುಜನೆತ್ತಿದೀ ಕ್ರಮ.

---

## ಶಬ್ದಗಳ ಅರ್ಥ

ಕೆಳದಿ–ಗೆಳತಿ; ಉಬ್ಬು – ಏರು; ದಿಟ್ಟ – ದಿನ್ನೆ; ತಬ್ಬು – ಅಪ್ಪು; ಪಯಣ – ಪ್ರಯಾಣ

## ವಿಶೇಷ ವಿಚಾರ

ಮುಕ್ಕು = ಒಂದು ಮುಷ್ಟಿ, ಬಸಿರೆ ಹೊಲ = ಗರ್ಭಿಣಿಯಾದ ಭೂಮಿ. (ಭೂಮಿ ಗರ್ಭಿಣಿಯಾದಂತೆ ತಿಳಿದು ಹೂ ಮುಡಿಸುವ ಕಾರ್ಯವನ್ನು ಆ ಭಾಗದ ಜನರು ಮಾಡುತ್ತಾರೆ. ಅದನ್ನೇ ಜ್ಞಾಪಿಸಿಕೊಂಡು ಕವಿಯು ಕವಿತೆ ಬರೆದಿದ್ದಾರೆ.)

## ಅಭ್ಯಾಸ

**ಕೃತಿ 1) ಶ್ರಾವಣ ಮಾಸದಲ್ಲಿ ಕಾಣುವ ಪ್ರಕೃತಿ ಸೌಂದರ್ಯವನ್ನು ಕವಿ ಹೇಗೆ ವರ್ಣಿಸಿದ್ದಾನೆ ಎಂಬುದನ್ನು ಬರೆಯಿರಿ**

**ಕೃತಿ 2)** **ಕೆಳಗೆ ಕೊಟ್ಟ ಶಬ್ದಗಳಿಂದ ವಾಕ್ಯ ಪೂರ್ಣಮಾಡಿರಿ.**

(ಸಂಭ್ರಮ, ಬೆಳೆಸಿದ, ಹಬ್ಬಿವೆ, ಕೆಳದಿ)

1) ಏನು ಹಸಿರು! ಏನು ಹಳದಿ ಸುತ್ತ ಮುತ್ತ ನೋಡು

2) ದಿಬ್ಬಗಳನ್ನು ತಬ್ಬಲೆಂದು ಎಲ್ಲ ನೆಲಕು

3) ಬಣ್ಣದೊಂದು ಜಾತ್ರೆಗಾಗಿ ತನ್ನ ಪಯಣ

4) ಬಸಿರೆ ಹೊಲಕೆ ಹೂವು ಮುಡಿಸಲೆಂದು ಬಂದ

**ಕೃತಿ 3)** **ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ.**

1) ಮುಡಿಸು, ಬಾಗಿದೆ, ಸೊಬಗು, ಜಾತ್ರೆ

**ಕೃತಿ 4)** **ಈ ಪದ್ಯದ ಸಾರಾಂಶ ನಿನ್ನ ಮಾತುಗಳಲ್ಲಿ ಬಣ್ಣಿಸಿರಿ.**

**ಕೃತಿ 5)** **ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಕಣ್ಣು ಪಡೆದ ಹಾಗಿರುವುದು ಯಾವುದು?

2) ಮುಗಿಲು ನೆಲಕೆ ಏನನ್ನು ಬಿತ್ತಿದೆ?

3) ಬಾನಿನಲ್ಲಿ ಮೋಡವು ಏಕೆ ಬಾಗಿದೆ?

***

931886